ಇರುದಿದ್ದಾಯ್ತು. ಉಕ್ಕುವ ಪ್ರಾಯ ಇತ್ತಲ್ಲ ಯಾರು ಏನೇ ಜರೀಲಿ. ಎಷ್ಟೇ ಕೆಲಸವಿರಲಿ, ಹೊಟ್ಟೆ ತುಂಬ ಊಟ ಕಣ್ಣು ತುಂಬ ನಿದ್ದೆ. ಹಾಸಿಗೆ ಮೂಸಿದೊಡನೆ. ಕಳ್ಳ ಬಂದು ಹೊತ್ ಕೊಂಡು ಹೋದ್ರೂ ಗೊತ್ತಾಗ್ತಾ ಇರ್ಲಿಲ್ಲ ಅಂಥ ನಿದ್ದೆ. ಇನ್ನು ನಿನ್ ಅಪ್ಪಯ್ಯನ ಹತ್ರ ಮಾತಾಡಿದ್ದನ್ನ ಕಂಡ್ರೆ ಅಷ್ಟೇ. ರಾಮಾಯಣ ಮಹಾಭಾರತ ಅಲ್ಲ ಕುರುಕ್ಷೇತ್ರನೇ ನಡೆದು ಹೋಗ್ತಿತ್ತು. ಆದ್ರೂ ನಿಮ್ಮನ್ನೆಲ್ಲ ಸಾಕಿ ಸಲುಹುವುದರಲ್ಲಿ ನೋವನ್ನು ಮರೆಯುತ್ತಿದ್ದೆ. ಈಗ ಸಹಿಸಿಕೊಳ್ಳೋಕೆ ಆಗಲ್ಲ ಶಾರಿ. ಮಗ ಸೊಸೆಯ ಅಸಡ್ಡೆಯ ಸಣ್ಣ ನೋಟ ಸಾಕು ಕಣೆ. ತೋಟದ ಬಾವಿಗೆ ಹಾರ್ಕೋಬೇಕು ಅನ್ಸುತ್ತೆ. ಕೈಯ್ಯಲ್ಲಿ ಕೆಲಸ ಮಾಡೋಕೆ ಆಗದಿದ್ ಮೇಲೆ ಭೂಮಿಗೆ ಭಾರವಾಗಿ ಮನೆಯವರ ಕಾಲಿನ ಕಸವಾಗಿ ಬದುಕಬಾರ್ದು ಕಣೆ'.

'ಬಿಡಮ್ಮ ಆಗೆಲ್ಲ ಮನೆ ಮನೆ ಅಂತ ದುಡಿದೆ. ಹೊರಗಡೆ ಹೋಗೇಕೆ ಒಂದು ಒಳ್ಳೆ ಸೀರೆ ಇತ್ತಾ? ನಿನ್ನತ್ರ ಚಿನ್ನ ಇತ್ತ? ಅಷ್ಟು ದೊಡ್ಡ ಸಂಸಾರನ್ನ ತೂಗಿಸೋದು ಸುಮ್ಮನೆ ಅಲ್ಲಮ್ಮ..'ಅಮ್ಮನನ್ನು ಸಮಾಧಾನಿಸಿದಳು ಶಾರಿ.

'ಅಯ್ಯೋ. ಅದನ್ನೆಲ್ಲ ಹೇಳಿದ್ರೆ ಈಗ ಯಾರು ನಂಬ್ತಾರೆ ಹೇಳು. ಕಾಡಿ ಬೇಡಿ ನಿನ್ನ ಅತ್ತೆ ಹತ್ರ ಸೀರೇನ ಇಸ್ಕೊಂಡು ಉಟ್ಕೊಂಡು ಊಟದ ಮನೆಗೆ ಹೋಗ್ತಾಯಿದ್ದೆ. ಆಸೆ ಏನ್ ಮಾಡೋದು ಹೇಳು? ಅವಳೋ ಕೊಡೋಕೆ ಕೊಡ್ತಾ ಇದ್ಲು. ದಿನ ಬೆಳಗಾದರೆ ಅಡಗಾಣಿಸೋಳು. ಅದು ಹೋಗ್ಲಿ ಬಸ್ರು ಬಾಣಂತೀಲಿ ಸ್ವಲ್ಪ ಮಾಡಿದರೇನೇ? ಕಣ್ಣೀರಲ್ಲೇ ಕೈ ತೊಳೆಸಿದ್ರು. ಹತ್ತು ದಿನ ಹಡೆದು ಹೊರಗೆ ಮೈಲಿಗೆ ಮನೆಯಲ್ಲಿರುತ್ತಿದ್ದೆನಲ್ಲ ಅದೇ ವಿಶ್ರಾಂತಿ ನನಗೆ. ಇಪ್ಪತ್ತು ದಿನ ಆಗ್ತಿದ್ದ ಹಾಗೆ ಶುರು. ಬೀಳುತ್ತಿದ್ದ ವೀಳೆಯದೆಲೆ ಕೊಡಬೇಕು. ಮಕ್ಕಳ ತಲೆ ಬಾಚೋದು. ಒಗೆದಿಟ್ಟ ಬಟ್ಟೆ ಮಡಿಸೋದು. ಮೊಸರು ಕಡೆಯೋದು, ಅಡಿಗೆಗೆ ತರಕಾರಿ ಹೆಚ್ಚೋದು.. ಅಯ್ಯಪ್ಪ ಒಂದು ಘಳಿಗೆ ನನ್ನ ಪಾಡಿಗೆ ನನ್ನ ಬಿಟ್ಟಿದ್ದಿದೆಯಾ? ಈಗ ನೆನೆಸಿಕೊಂಡ್ರೆ ಎಷ್ಟು ಸಿಟ್ಟು ಬರುತ್ತೆ ಗೊತ್ತೇನೆ ಶಾರಿ. ಹುರಿದು ಮುಕ್ಕಿದ್ರು. ಬಡವರ ಮನೆ ಹೆಣ್ಣು ಮಕ್ಕಳೆಂದರೆ ಈ ರೀತಿಯ ಸಸಾರ. ಹೇಳಿದ ಕೆಲ್ಸ ಮಾಡ್ಕೊಂಡು ಬಿದ್ದಿರ್ಬೇಕಾವೆ ಅಂತ ಅವರ ಲೆಕ್ಕ. ಈಗಿನ ಸೊಸೆಯರಿಗೆ ಹೌದಾದ ಒಂದು ಮಾತು ಹೇಳೋ ಹಾಗಿದೆಯಾ? ಇಲ್ಲಪ್ಪ. ನನ್ನ ಕರ್ಮ. ಆಗೆಲ್ಲ ಅತ್ತೆ ನಾದಿನಿಯರ ಹತ್ರ ನುರಿದ್ದಿದ್ದಾಯ್ತು. ಈಗ ಸೊಸೆಯರ ಹತ್ರ ಬೇಯೋದು. ಒಟ್ಟಿನಲ್ಲಿ ನನ್ನ ಸ್ಥಿತಿ ತ್ರಿಶಂಕು ಸ್ವರ್ಗ' ಅಮ್ಮ ದೀರ್ಘವಾದ ನಿಟ್ಟುಸಿರು ಹೊರಹಾಕಿದಳು.

ಅಮ್ಮ ನಮ್ಮ ಮನೆಗೆ ಬಂದಾಗಲೆಲ್ಲ ಇದು ಪುನರಾವರ್ತನೆ ಆಗುತ್ತಿತ್ತು. ಅಮ್ಮನ ಸಂಕಟ ಒಂದಿಷ್ಟು ಕಳೆದು ಹಗುರಾಗುತ್ತಳಲ್ಲ ಎಂದು ನಾನು ಕುಳಿತು ಕಿವಿಯಾಗುತ್ತಿದ್ದೆ. 'ಇಂದಿನ ಸಂಬಂಧಗಳ ಬಗ್ಗೆ ಅತ್ತೆ ಸೊಸೆಯರ ಬಗ್ಗೆ ಕಳೆದ ಕಷ್ಟವನ್ನು ಮರೆಯುವ ಬಗೆ ನಯವಾಗಿ ಒಂದಿಷ್ಟು ಮನದಾಳಕ್ಕೆ ಇಳಿಯುವಂತೆ ಹೇಳುತ್ತಿದ್ದೆ. ಹೌದೆಂದು ತಲೆದೂಗುತ್ತಾ ಚಿಕ್ಕ ಮಕ್ಕಳಂತೆ ಕೇಳುತ್ತಿದ್ದಳು. ಈ ಒಂದು ತಿಳುವಳಿಕೆ ಆಗ ನಂಗಿದ್ದಿದ್ದರೆ ಈ ಗೋಣಗಾಟ ತಪ್ಪುತ್ತಿತ್ತೇನೋ?' ವಿಷಾದದಿಂದ ಮೆಲ್ಲನುಡಿದಳು.

'ಅಮ್ಮನ ಕಥೆ ಕೇಳಿದ್ರೆ ಹೊಟ್ಟೆ ಉರಿಯುತ್ತೆ. ಹೇಗೆ, ಬೆಂದು ಬಸವಳಿದು ಹೋದಳು. ಕೊನೆವರೆಗೂ ಅವಳನುಭವಿಸಿದ ನೋವು ಸಂಕಟವನ್ನು ಒಂಚೂರು ಮರೆಯೋಕೆ ಆಗಲಿಲ್ಲ. ಯಾತನೆಯೊಂದಿಗೆ ಬದುಕು ಸವೆಸಿದಳು. ಒಂದೂವರೆ ಎರಡು ವರ್ಷಕ್ಕೊಂದು ಮಕ್ಕಳನ್ನು ಹೆರುತ್ತಾ ಅವರ ಲಾಲನೆ ಪಾಲನೆಯಲ್ಲಿಯೇ ಕಳೆದು ಹೋದಳು. ಅಪ್ಪಯ್ಯನ ಮೇಲು ಸಣ್ಣದೊಂದು ಅಸಹನೆಯಿತ್ತು. ಒಳ್ಳೆಯ ಮಾತೊಂದು, ಪ್ರೀತಿಯ ನೋಟವೊಂದನ್ನ ಕೈಹಿಡಿದಾತನಿಂದ ಅವಳು ನಿರೀಕ್ಷಿಸಿದ್ದಳು. ಗೊಣಗಾಟದ ಮೂಲವೆ ಅತೃಪ್ತಿ! ನನಗನ್ನಿಸಿದ್ದು ಹೀಗೆ'.

ಮಕ್ಕಳು ಪ್ರಾಯಕ್ಕೆ ಬಂದು ಒಂದೊಂದು ಮದುವೆ, ಮುಂಜಿ ಹಬ್ಬ ನಡೆಯುತ್ತಿರಲು ಅಮ್ಮನ ಗಟ್ಟಿ ದನಿ ಕೇಳಲಾರಂಬಿಸಿತು ಅಂಗಳದಾಚೆಗೂ.

'ನೋಡಿ ಒಂದಷ್ಟು ಚಿನ್ನ, ಒಳ್ಳೆಯ ನಾಲ್ಕು ಸೀರೆ ಮದುವೆ ಹೆಣ್ಣಿಗೆ ತರ್ಲೇಬೇಕು. ಬಿಚ್ಕೋಲೆ ಗೌರಮ್ಮನ ತರ ಧಾರೆ ಎರೆಯೋಕೆ ನಾವೇನು ಇಲ್ಲದೋರಲ್ಲ'

'ನಿನ್ನ ಅಪ್ಪನ ಮನೆಯಿಂದ ನೀನೇನು ತಂದಿದ್ದೀಯಾ?' ಅಪ್ಪಯ್ಯನ ದರ್ಪದ ಏರು ದನಿ.

ನನ್ನಪ್ಪನಿಗೆ ಕೊಡೋಕೆ ಏನು ಇರಲಿಲ್ಲ. ಆದರೆ ನನ್ನ ಮಕ್ಕಳ ಅಪ್ಪನಿಗೆ ಎಲ್ಲ ಇದ್ದು ಏನೂ ಇಲ್ಲದಂತೆ ಧಾರೆ ಮಂಟಪಕ್ಕೆ ನಿಲ್ಲಿಸೋಕೆ, ನಾನಿನ್ನೂ ಬದುಕಿದ್ದೀನಿ, ಅರೇ, ಇಂಥ ಸ್ಪಷ್ಟ ದನಿ, ಗಟ್ಟಿ ದನಿ ಅಮ್ಮನಿಗೆ ಹೇಗೆ ಬಂತು? ನಾನು ಅಚ್ಚರಿಯಿಂದ ಅಮ್ಮನನ್ನೆ ನೋಡತೊಡಗಿದೆ. ಅವಳ ಬದುಕು ಅವಳಿಗರಿವಿಲ್ಲದೆ ಸಮೃದ್ಧಗೊಳಿಸಿತ್ತು. ಒಳಗೊಳಗೆ ಚಿಗಿಯುತ್ತ ದೈತ್ಯಳಾಗಿ ಬೆಳೆದಿದ್ದಳು. ಸಿನಿಕತನವನ್ನು ಆಪೋಶನವನ್ನಾಗಿ ಕುಡಿದು ಪ್ರೀತಿಯ ಮಹಾಪೂರವೇ ಅವಳಾಗಿದ್ದಳು. ಇದೆಲ್ಲ ಹೇಗಾಯಿತು? ನನ್ನ ತಲೆಯೊಳಗೆ ಹುಳುಗಳು ಓಡಾಡತೊಡಗಿದವು.

ಅಮ್ಮ ಶಾಲೆಯಲ್ಲಿ ಕಲಿತದ್ದು ಬರೇ ಮೂರನೇ ತರಗತಿಯವರೆಗೆ, ಆದರೆ ಬದುಕಿನ ಪಾಠದಲ್ಲಿ ಕಲಿತದ್ದೇ ಹೆಚ್ಚು. ಸದಾ ಚೈತನ್ಯದಿಂದಿರುವ ಅವಳ ವಿಶಾಲ ಮನಸ್ಸನ್ನು ಎಲ್ಲರೂ ಇಷ್ಟಪಡುತ್ತಿದ್ದರು. ಕೊನೆ ಕೊನೆಗೆ ಅವಳೊಂದಿಷ್ಟು ಇಂಗ್ಲಿಷ್ ಪದಗಳನ್ನು ಕಲಿತು ದಿನಬಳಕೆಗೆ ಅದನ್ನು ಉಪಯೋಗಿಸುತ್ತಿದ್ದಳು. ಅದನ್ನು ಕಂಡ ಅವಳ ಆತ್ಮೀಯರು 'ಅಡ್ಡಿಲ್ಲ ಕಣೆ ಬಾಬಿ. ಇಂಗ್ಲಿಷೂ ಕಲ್ತೆ. ನಾವೂ ಇದ್ದೀವಿ ಕೂಳ್ ದಂಡಕ್ಕೆ' ಎಂದು ನಕ್ಕು ನಲಿಯುತ್ತಿದ್ದರು. ಹಲೋ... ಥ್ಯಾಂಕ್ಸ್, ಟಾಟಾ ಬಾಯಿ ಬಾಯಿ, ಗುಡ್ ಮಾರ್ನಿಂಗ್, ಗುಡ್ ನೈಟ್, ವಾಟ್ ನೇಮ್, ಕಂಕಂ, ಎಸ್.ಎಸ್., ನೋ ಇದೆಲ್ಲ ಅವಳು ಕಲಿತದ್ದು. ನಿರ್ಮಲ ಮನಸ್ಸಿನಿಂದ ಅವಳ ಬಾಯಿ ಹೇಳುತ್ತಾ ಕೈಕುಲುಕುವ ಪ್ರೀತಿಯ ರೀತಿಗೆ ಎಲ್ಲರ ಹೃದಯ ಮಲ್ಲಿಗೆಯಂತೆ ಅರಳುತ್ತಿತ್ತು.

ಹಿಂದಿನ ಅರ್ಥವಿಲ್ಲದ ಆಚಾರ ವಿಚಾರಗಳು, ಮೂಢ ನಂಬಿಕೆಗಳು, ಡಂಭಾಚಾರದ ಮಡಿ ಮೈಲಿಗೆ ಉಪವಾಸಗಳ ಬಗ್ಗೆ ಒಂದಷ್ಟು ಅಸಮಾಧಾನವಿತ್ತು. ಅಮ್ಮ ನಮ್ಮ ಪ್ರಾಣ ತಿನ್ನೋಕೆ ಹಿಂದಿನವರು ಇದನ್ನೆಲ್ಲ ಮಾಡಿದ್ದು ಎಂದು ಒಮ್ಮೊಮ್ಮೆ ಗುಟುರು ಹಾಕುತ್ತಿದ್ದಳು. ಕ್ಲೀನು, ರುಚಿ, ಶುಚಿ ಜೊತೆಗೆ ಊಟ ಉಪಚಾರ ಹಾಲು ಮಜ್ಜಿಗೆ ಅಚ್ಚುಕಟ್ಟಾಗಿರಬೇಕು. ಎಲ್ಲರೂ ಸೇರಿ ನಕ್ಕು ನಲಿದು ತಿನ್ನುಣ್ಣಬೇಕು. ನಾಳೆ ಕಥೆ ನಾರಾಯಣ ಬಲ್ಲ ಎನ್ನುತ್ತ ನಕ್ಕು ಕೈ ತಿರುಗಿಸುತ್ತಿದ್ದಳು. ನೆಂಟರಿಷ್ಟರು ಮನೆಗೆ ಬಂದರೆ ಅಂದೇ ಹಬ್ಬ ಹುಣ್ಣಿಮೆ ಹೋಳಿಗೆ. ರಾಜ್ಯ ಗೆದ್ದ ಸಂಭ್ರಮ ಸಡಗರ. ಕೆಲಸದಾಳುಗಳು ಹಿತ್ತಿಲ ಬಾಗಿಲಲ್ಲಿ ಕೂಗಿದರೆ ಸಾಕು, 'ಸುಬ್ಬಿನೇನೇ ನಿಂತ್ಕೋ ಬಂದೆ' ಎನ್ನುತ್ತಾ ಮನೆಯ ಒಳಗೆಲ್ಲ ಓಡಾಡಿ ಬಣ್ಣದ ಸೌತೆಕಾಯಿಯೋ, ಕಾಯಿ ಹೋಳೊ. ಬಾಳೆ ಕಾಯೋ ಏನೂ ಇಲ್ಲಾಂದ್ರೆ ಅಡಿಕೆ ಚೂರು ಎಲೆ ಅವಳ ಮಡಿಲಿಟ್ಟು ಒಂದ್ಲೋಟ ಚಾಯ್ ಮಾಡಿ ಅವಳ ಲೋಟಕ್ಕೆ ಸುರಿಯುತ್ತಿದ್ದಳು. ತರಕಾರಿ ಯಾಕೆ ಕೊಡೋದು ಒಂದು ದಿನದ ಅಡಿಗೆಗೆ ಆಗ್ತ ಇತ್ತು ಎಂದು ಅಡಿಗೆ ಮನೆಯಿಂದ ಸೊಸೆ ಗೊಣಗಿದರೆ 'ಮನೇನಲ್ಲಿ ಬೆಳೆದದ್ದು ತಿನ್ಕೊಂಡು ಸಾಯ್ಲಿ ಬಿಡು. ಪಾಪ ದುಡ್ಡು ಕೊಟ್ಟು ಎಲ್ಲಿಂದ ತರ್ತಾವೆ' ಎಂದು ಕನಿಕರಿಸುತ್ತಿದ್ದಳು. ಸಾಯ್ಲಿ ಅಂದ್ರೆ ಕೆಟ್ಟದಾಗಿ ಹೇಳುವುದಲ್ಲ ಅದು. ಮಲೆನಾಡಿನ ಕಡೆ ಪ್ರೀತಿಯಿಂದ ಹೇಳುವುದು.

ಆಗ ತಾನೆ ಹಾಲು ಕಾಯಿಸಿ ಗಟ್ಟಿ ಡಿಕಾಕ್ಷನ್ ಹೊಡೆದು ನೊರೆ ನೊರೆಯಾದ ಹದವಾಗಿ ಕಾಫಿ ಮಾಡಿಕೊಡಬೇಕು. ಸೊರಗುಟ್ಟುತ್ತಾ ಬಾಯಿ ಚಪ್ಪರಿಸುತ್ತಾ ಕಣ್ಣು ಹೊಳೆಸುತ್ತಾ ಅವಳು ಕುಡಿಯುವುದನ್ನ ನೋಡುವುದೇ ನಮಗೆ ಮಜ.

'ಕಾಫಿಗೆ ಸಕ್ಕರೆ ಹಾಕಿದ ಹಾಗೆ ಇದೆ ಕಣೇ ಎಂಥ ರುಚಿ! ಅಮೃತ ಕಣೆ, ನಮ್ಮನೆನಲ್ಲೂ ಮಾಡ್ತಾವೆ ಕಾಫಿ, ಬಿಸಿ ನೀರು'. ಎಮ್ಮೆ ದನವೆಂದು ಕರಾವಿಗೇನೂ ಕೊರತೆ ಇಲ್ಲ ಅಲ್ಲಿ. ಒಂದಷ್ಟು ಹಾಲು ಮಾರಿದರೂ ಪಾತ್ರೆ ತುಂಬಿರುತ್ತಿತ್ತು. ಒಳ್ಳೆಯ ಕಾಫಿ ಅಮ್ಮನಿಗೆ ಕೊಡಬಾರದೆಂಬ ಹಠವೋ? ಅಥವಾ ಅಮ್ಮನ ದುರಾದೃಷ್ಟವೋ ತಿಳಿಯದು. ಅಣ್ಣಂದಿರ

## ವ್ಯಾಲೆಂಟೈನ್ ಡೇ

ಕಂಡು
ಕೇಳರಿಯದ
ಹೂವುಗಳು ಅರಳಿದವು
ಇಬ್ಬನಿಗೆ ಮುತ್ತಿಕ್ಕಲು

★ ಫಾಲನೇತ್ರ ಗಂಗಪ್ಪ ಸಜ್ಜನ



ಕಣಕಾಲಮಠ